**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**OS**.ನಂ.61/2019

**ಸಿ.ಡಬ್ಲ್ಯೂ-2**

ಸಾಕ್ಷಿಯ ಹೆಸರು : ಬಸವರಾಜ ರಾವೂರ

ತಂದೆ/ಗಂಡನ ಹೆಸರು : ಅಣ್ಣಾರಾಯ

ವಯಸ್ಸು : 43 ವರ್ಷ

ಉದ್ಯೋಗ : ಉಪತಹಶೀಲ್ದಾರ

ವಾಸಸ್ಥಳ : ಇಂಡಿ

**ದಿನಾಂಕ**:11-06-2025 **ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಐ.ಎಸ್.ಎಮ್. ವಾದಿ ಪರ ವಕೀಲರಿಂದಃ**

ನಾನು ಈಗ್ಗೆ 2 ವರ್ಷಗಳಿಂದ ಇಂಡಿಯಲ್ಲಿ ಉಪತಹಶೀಲ್ದಾರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು 2014 ರಿಂದ 2023 ರ ವರೆಗೆ ಕಂದಾಯ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ24.08.2018 ರಂದು ತಹಶೀಲ್ದಾರ ಇವರು ದಾವಾ ರಸ್ತೆಯ ವಸ್ತುಸ್ಥಿತಿಯ ಬಗ್ಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಆದೇಶ ಮಾಡಿರುತ್ತಾರೆ. ದಿಃ28.08.2018 ರಂದು ನಾನು ದಾವಾ ರಸ್ತೆಗೆ ಭೇಟಿ ನೀಡಿ ವಹಿವಾಟು ರಸ್ತೆಯು ಸುಮಾರು 30 ವರ್ಷಗಳಿಂದ ಇರುತ್ತದೆ ಎಂದು ಕಂಡುಬಂದಿದ್ದು ಆ ಪ್ರಕಾರ ನಾನು ವರದಿಯನ್ನು ನೀಡಿರುತ್ತೇನೆ. ವಹಿವಾಟು ರಸ್ತೆಯು ಯಾರ ಜಮೀನಿನಲ್ಲಿ ಇರುತ್ತದೆ ಎಂದು ನಾನು ಸರ್ವೆ ನಂಬರನ್ನು ವರದಿಯಲ್ಲಿ ನಮೂದಿಸಿರುತ್ತೇನೆ. ನಾನು ನಿ.ಪಿ.20 ನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿ.ಪಿ.20 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ವಿ.ಎಸ್.ಎಚ್.ವಕೀಲರಿಂದಃ**

ಗ್ರಾಮ ನಕಾಶೆಯಲ್ಲಿ ದಾವಾ ರಸ್ತೆ ಇದ್ದ ಬಗ್ಗೆ ನಾನು ನೋಡಿಲ್ಲ. ಗ್ರಾಮ ನಕಾಶೆಯಲ್ಲಿ ಇರದೇ ಇರುವ ದಾರಿಯನ್ನು ನಾವು ಸ್ಥಳಕ್ಕೆ ಭೇಟಿ ನೀಡಿ ದಾರಿಯನ್ನು ಗುರ್ತಿಸಿ ಸರ್ವೆ ಮಾಡುವ ಅಧಿಕಾರ ನಮಗೆ ಇರುವುದಿಲ್ಲ ಆದರೆ ತಹಶೀಲ್ದಾರ ಇವರ ಆದೇಶ ಮಾಡಿದರೇ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಮಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರು ಸಹ ಕಾನೂನುಬಾಹಿರವಾಗಿ ನಿ.ಪಿ.20 ನ್ನು ಸಲ್ಲಿಸಿರುತ್ತೇನೆ

-2-

ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಪರಿಶೀಲನೆ ಮಾಡದೇ ಇದ್ದರು ಸಹ ವಾದಿಯರಿಗೆ ಅನುಕೂಲವಾಗಲಿ ಎಂದು ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**